ಶಿಕ್ಷಣ ಮತ್ತು ಸಮಾಜದಲ್ಲಿನ ಬದಲಾವಣೆಗೆ, ಪಠ್ಯಕ್ರಮದ ಸುಧಾರಣೆಗೆ, ವ್ಯವಸ್ಥೆಯ ಮೇಲಿನ ಪರಿಣಾಮಕಾರಿ ನಿಯಂತ್ರಣವನ್ನು ದೂರವಾಗಿಸಲು ಅಥವಾ ಕೇಂದ್ರದೆಡೆಗೆ ಒಯ್ಯಲು ಹಾಗೂ ನಿರ್ದಿಷ್ಟವಾದ ರಾಜಕೀಯ ಗುರಿಗಳನ್ನು ಸಾಧಿಸಲು ಬಳಸಿಕೊಳ್ಳಲಾಗುತ್ತಿದೆ.

ನವೀನ ಕಲಿಕಾ ನಿರ್ಧರಣೆಯನ್ನು ಸ್ವ-ವಿಮರ್ಶೆಯೂ ಸೇರಿದಂತೆ, ವಿಮರ್ಶಾತ್ಮಕ ಚಿಂತನೆಯನ್ನು ಬೆಳಸಿಕೊಳ್ಳಲು ವಿನ್ಯಾಸ ಮಾಡಲಾಗಿದೆ. ನವೀನ ಕಲಿಕಾನಿರ್ಧರಣೆಯ ತಂತ್ರಗಳು ಸಮಸ್ಯೆಯಿಂದ ಹೊರತಾಗಿಯೇನೂ ಇಲ್ಲ ಮತ್ತು ಅವುಗಳು "ಪ್ರಸಿದ್ಧ ವೈಫಲ್ಯ" ಎಂಬ ಹಣೆಪಟ್ಟಿಯನ್ನು ತಪ್ಪಿಸಿಕೊಳ್ಳಲು, ಅವುಗಳನ್ನು ಬಹಳ ಎಚ್ಚರಿಕೆಯಿಂದ ಜಾರಿಗೆ ತರಬೇಕಾದ ಅಗತ್ಯವಿದೆ. ಆದರೂ, ನಾವು ಕಲಿಕಾನಿರ್ಧರಣೆಯನ್ನು ಮಾಡುವ ವಿಧಾನದಲ್ಲಿ ಬದಲಾವಣೆಗಳನ್ನು ತರಬೇಕಾದ ಅಗತ್ಯತೆ ಸಂಭಾವ್ಯ ಸಮಸ್ಯೆಗಳಿಗಿಂತ ಮಿಗಿಲಾದುದು. ಕಲಿಕಾನಿರ್ಧರಣೆಗಾಗಿನ ನವೀನ ವಿಧಾನಗಳನ್ನು, ಮೂಲಭೂತವಾಗಿ ವಿದ್ಯಾರ್ಥಿ ಕಲಿಕೆಯ ಗುಣಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ರೂಪಿಸಲಾಗಿದೆ ಮತ್ತು ಇದನ್ನು ಕಲಿಕಾನಿರ್ಧರಣೆಯಾಗಿ ನೋಡದೆ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿನ ಒಂದು ಅವಿಭಾಜ್ಯ ಭಾಗವನ್ನಾಗಿ ನೋಡುವುದರಲ್ಲಿ ನಮ್ಮ ಸವಾಲು ಅಡಗಿದೆ.



***ಉಮಾ ಹರಿಕುಮಾರ್*** *ಅವರು ಈಗ ಅಜೀಂ ಪ್ರೇಂಜೀ ಪ್ರತಿಷ್ಠಾನದಲ್ಲಿ ಬಾಹ್ಯ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾರೆ, ಇವರು ಅಜೀಂ ಪ್ರೇಂಜೀ ಪ್ರತಿಷ್ಠಾನವನ್ನು 2003ರಲ್ಲಿ ಸೇರಿಕೊಂಡರು. 25 ವರ್ಷಗಳ ಅಧ್ಯಾಪನದ ಅನುಭವವಿರುವ ಉಮಾ ಪ್ರತಿಷ್ಠಾನವನ್ನು ಸೇರುವ ಮೊದಲು, ಸೋಫೈಯಾ ಹೈಸ್ಕೂಲ್ ಮತ್ತು ಕೇಂದ್ರೀಯ ವಿದ್ಯಾಲಯ ಸಂಘಟನೆಯಲ್ಲಿ ಶಿಕ್ಷಕಿಯಾಗಿ ದುಡಿದಿದ್ದಾರೆ. ಇವರನ್ನು uma.harikumar@azimpremjifoundation.org ನಲ್ಲಿ ಸಂಪರ್ಕಿಸಬಹುದು.*

# ಬೃಹತ್ ಪ್ರಮಾಣದ ನೈದಾನಿಕ ಕಲಿಕಾ ನಿರ್ಧರಣೆ: ಗುಜರಾತ್ ಅನುಭವ

ವೈಜಯಂತಿ ಶಂಕರ್



ಭಾರತದಲ್ಲಿ, ASER ಮತ್ತು Educational Initiatives ಗಳಂತಹ ಸಂಸ್ಥೆಗಳು ನಡೆಸಿದ ಪ್ರತ್ಯೇಕ ಮೌಲ್ಯಮಾಪನವು, ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕಲಿಕೆ ಸರಿಯಾಗಿ ಆಗುತ್ತಿಲ್ಲ ಮತ್ತು ಮೂಲ ಅಕ್ಷರ ಜ್ಞಾನ ಹಾಗೂ ಲೆಕ್ಕದ ಜ್ಞಾನಗಳಲ್ಲಿ ನಿರೀಕ್ಷಿತ ಸಾಮರ್ಥ್ಯವನ್ನು ಅವರು ಗಳಿಸುತ್ತಿಲ್ಲ ಎಂದು ತೋರಿಸಿಕೊಟ್ಟಿದೆ. ಈಗ, ಭಾರತವು, 6 ರಿಂದ 14 ವರ್ಷದ ವಯೋಮಾನದಲ್ಲಿರುವ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು ಕಾಯಿದೆಯನ್ನು (RTE) ಜಾರಿಗೆ ತಂದಿದೆ. ಪ್ರತಿಯೊಂದು ಮಗುವೂ ಅಪೇಕ್ಷಿತ ಗುಣಮಟ್ಟದ ಶಿಕ್ಷಣವನ್ನು ಪಡೆದರೆ ಮಾತ್ರ, RTE ಉದ್ದೇಶಗಳಾದ ಪೂರ್ಣ ದಾಖಲಾತಿ, ಶಿಕ್ಷಣದ ಲಭ್ಯತೆ, ಸಮಾನತೆ, ಇತ್ಯಾದಿಗಳು ಅರ್ಥಪೂರ್ಣವಾಗುವವು. ಎಲ್ಲರಿಗೂ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಶ್ರಮಿಸುತ್ತಿರುವ ನಿಟ್ಟಿನಲ್ಲಿ, 2 ಅಂಶಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದದ್ದು ಬಹುಮುಖ್ಯವಾಗಿದೆ – 1. ನಾವು ಯಾವ ಮಟ್ಟದಲ್ಲಿದ್ದೇವೆ ಮತ್ತು 2. ನಾವು ಯಾವ ಮಟ್ಟಕ್ಕೇರಬೇಕು. ಉತ್ತಮ ವಿನ್ಯಾಸದ ನೈದಾನಿಕ ಕಲಿಕಾನಿರ್ಧರಣೆಗಳು ನಮ್ಮ ಪ್ರಸ್ತುತ ಸ್ಥಿತಿ ಮತ್ತು ಗುಣಮಟ್ಟಗಳ ಸ್ಪಷ್ಟ ಚಿತ್ರವನ್ನು ಕೊಡುವುದರೊಂದಿಗೆ ನಾವು ಸಾಧಿಸಬೇಕಾದ ಗುರಿಯ ಬಗ್ಗೆ ಅರಿವನ್ನು ಮೂಡಿಸುವ ಕಲಿಕೆಯ ತಂತ್ರಗಳ ಅಂಗಭಾಗಗಳಾಗಿರುತ್ತವೆ.

ಕಂಠಪಾಠ ಮಾಡಿ ಕಲಿಯುವುದೇ ಭಾರತದಲ್ಲಿನ ಪ್ರಮುಖ ಸಮಸ್ಯೆ ; ನಾವು ಈ ಸಮಸ್ಯೆಯನ್ನು ಬಗೆಹರಿಸದಿದ್ದರೆ, ಶಿಕ್ಷಣ ಸುಧಾರಣೆ ಅಥವಾ ವಿದ್ಯಾರ್ಥಿಗಳ ಕಲಿಕಾ ಫಲಿತಾಂಶಗಳ ಗುಣಮಟ್ಟ ಸುಧಾರಣೆಯ ಗುರಿಯನ್ನು ಸಾಧಿಸುವುದು ಅಸಾಧ್ಯ, ಹಾಗೂ ಈ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಪರಿಹರಿಸಿದರೆ, ಇತರ ಸಮಸ್ಯೆಗಳು ಅನುಕ್ರಮವಾಗಿ ಪರಿಹಾರವಾಗುತ್ತಾ ಬರುತ್ತವೆ.

ಭಾರತದಲ್ಲಿನ ಕಲಿಕಾನಿರ್ಧರಣೆಯ ಇತಿಹಾಸ ಮತ್ತು ಸ್ವರೂಪವನ್ನು ಗಮನಿಸಿದಾಗ, ಬಹಳಷ್ಟು ರಾಜ್ಯಗಳಲ್ಲಿ, ವಿದ್ಯಾರ್ಥಿಗಳ ಕಲಿಕೆಯನ್ನು, ಶಾಲಾ ಮತ್ತು ಪರೀಕ್ಷಾ ಮಂಡಳಿಗಳು ನಡೆಸುವ ಪರೀಕ್ಷೆಗಳಲ್ಲಿನ ಉತ್ತೀರ್ಣತೆಯ ಪ್ರಮಾಣವನ್ನು ಆಧರಿಸಿ ನಿರ್ಧರಿಸಲಾಗುತ್ತದೆಂದು ತಿಳಿದುಬರುತ್ತದೆ. ಇವು ಅತ್ಯಂತ ಪ್ರತಿಷ್ಠೆಯ ಪರೀಕ್ಷೆಗಳಾಗಿದ್ದು, ವಿದ್ಯಾರ್ಥಿಗಳಿಗೆ ಸಾಧ್ಯವಾದಷ್ಟೂ ಅನುಕೂಲತೆಯನ್ನು ಒದಗಿಸಿ ಹೆಚ್ಚಿನ ವಿದ್ಯಾರ್ಥಿಗಳು ಕನಿಷ್ಠ ಮಿತಿಯನ್ನು ಪಡೆದು ಉತ್ತೀರ್ಣರಾಗುವಂತೆ ವಿನ್ಯಾಸಗೊಳಿಸಲಾಗಿರುತ್ತವೆ, ಇದರ ನಂತರ ಪ್ರತಿ ಘಟಕದ ಕೊನೆಯಲ್ಲಿ, ಅಥವಾ, ನಿರ್ದಿಷ್ಟ ಶೈಕ್ಷಣಿಕ ವರ್ಷದ ನಿಗದಿತ ಅವಧಿಗಳಲ್ಲಿ ಶಿಕ್ಷಕರು ತಯಾರಿಸಿದ ತರಗತಿಯ ಕಲಿಕಾನಿರ್ಧರಣೆಗಳು ಬರುತ್ತವೆ. ಈ ಶಾಲಾ ಕಲಿಕಾನಿರ್ಧರಣೆಗಳು ನೇರವಾಗಿ ಪಠ್ಯಪುಸ್ತಕವನ್ನು ಆಧರಿಸಿರುವುದರ ಜೊತೆಗೆ, ಮಂಡಳಿಯ ಪ್ರಶ್ನೆಪತ್ರಿಕೆಗಳಲ್ಲಿ ಬಳಸಲಾಗಿರುವ ಪ್ರಶ್ನೆಗಳ ವಿನ್ಯಾಸ ಮತ್ತು ಪ್ರಶ್ನೆ ಮಾದರಿಯ ರೀತಿಯಲ್ಲೇ ಇರುತ್ತವೆ. ಕಂಠಪಾಠ ಮತ್ತು ಸ್ಮರಣೆಯ ಮೇಲೆ ಹಾಗೂ ನಿರೀಕ್ಷಿತ ಪರಿಮಿತ ಉತ್ತರಗಳನ್ನೇ ಕೊಡಬೇಕು ಎಂಬ ಬಗ್ಗೆ ಹೆಚ್ಚಾಗಿ ಗಮನ ನೀಡಲಾಗುತ್ತಿದೆ. ಈ ಕಲಿಕಾನಿರ್ಧರಣೆಗಳನ್ನು ಕಲಿಕೆಯ ಒಂದು ಅಂಗಭಾಗವಾಗಿ ಅಂದರೆ ಕಲಿಕೆಗಾಗಿ ಕಲಿಕಾನಿರ್ಧರಣೆಯಾಗಿ, ನೋಡದೇ, ಅಂದರೆ, ವಿದ್ಯಾರ್ಥಿಯು ಏನನ್ನು ಎಷ್ಟರ ಮಟ್ಟಿಗೆ ಕಲಿತಿದ್ದಾನೆ ಮತ್ತು ಎಲ್ಲಿ ಅವನಿಗೆ ಕಲಿಯಲು ಕಷ್ಟವಾಗುತ್ತಿದೆ ಎಂಬುದನ್ನು ಅವುಗಳಿಗೆ ಸೂಕ್ತವಾದ ಪರಿಹಾರವನ್ನು ಒದಗಿಸಲು ಸಾಧ್ಯವಾಗುವಂತೆ ಪತ್ತೆ ಹಚ್ಚುವುದು ಇಲ್ಲಿ ನಡೆಯುತ್ತಿಲ್ಲ. ಇಂತಹ ಕಲಿಕೆಯನ್ನು ಉತ್ತಮ ಪಡಿಸುವ ಕಲಿಕಾನಿರ್ಧರಣೆಗಳನ್ನು ರಚಿಸಲು ಬೇಕಾದ ಸಾಮರ್ಥ್ಯ ಪ್ರಸ್ತುತ ಶಿಕ್ಷಕರಲ್ಲೂ ಲಭ್ಯವಿಲ್ಲ. ಈ ಸಾಮರ್ಥ್ಯವನ್ನು ನಿರಂತರವಾಗಿ ಬಹಳ ವರ್ಷಗಳೇ ನಿರ್ಮಿಸಬೇಕಾಗಿದೆ.

ಎರಡು ಸಂಖ್ಯೆಗಳ ಲಘುತಮ ಸಾಮಾನ್ಯ ಅಪವರ್ತ್ಯ (ಎಲ್.ಸಿ.ಎಂ.) ಲೆಕ್ಕವನ್ನು ಮಾಡುವಂಥ ಆದರೆ ತಾವೇನು ಮಾಡಿದ್ದಾರೆ ಏಕೆ ಮಾಡಿದ್ದಾರೆಂದು ವಿವರಿಸಲು ಬಾರದ; **ಒತ್ತಡ** ಎಂದರೆ ಏನು ಎಂದು ವ್ಯಾಖ್ಯಾನವನ್ನು ಪಟಪಟ ಹೇಳುವ ಆದರೆ ಅದನ್ನು ಅರ್ಥಮಾಡಿಕೊಂಡಿರದ ಅಥವಾ ಅನ್ವಯಿಸುವುದು ಹೇಗೆ ಎಂದು ತಿಳಿಯದ; ಹಾಗೂ ಐದು ವರ್ಷಗಳ ಕಾಲ ದ್ವಿತೀಯ ಭಾಷೆಯನ್ನು ಅಧ್ಯಯನ ಮಾಡಿರುವ ಆದರೆ ಅದನ್ನು ಸಮರ್ಪಕವಾಗಿ ಉಪಯೋಗಿಸಲಾರದ ವಿದ್ಯಾರ್ಥಿಗಳಿಂದ ನಮ್ಮ ಶಾಲೆಗಳು ತುಂಬಿವೆ. ಇದೇ ಕಂಠಪಾಠ ಕಲಿಕೆ, ಮತ್ತು ಇದು, ವಿಷಯ ಮನದಟ್ಟು ಮಾಡಿಕೊಳ್ಳುವುದಕ್ಕೆ ಬದಲಾಗಿ ಪರೀಕ್ಷೆಯಲ್ಲಿ ಅಂಕಗಳಿಸುವಿಕೆಯ ಮೇಲೆ ಮಾತ್ರ ಗಮನವು ಹರಿದಾಗ ಉಂಟಾಗುವಂತಹದ್ದು. ಒತ್ತಡ, ಮನೆಪಾಠದ ಸಮಸ್ಯೆಗಳು, ಉದ್ಯೋಗಾರ್ಹತೆಯನ್ನು ಹೊಂದಿರದ ಪದವೀಧರರು ಇವು ಕಂಠಪಾಠ ಕಲಿಕಾ ಸಮಸ್ಯೆಯ ಗುಣಲಕ್ಷಣಗಳು. ಇದಕ್ಕಿಂತಲೂ ಮುಖ್ಯವಾಗಿ, ಶಿಕ್ಷಣದ ಅರ್ಥಪೂರ್ಣತೆಯನ್ನು ಅಂದರೆ ಶಿಕ್ಷಣದ ಪ್ರಯೋಜನವಾದರೂ ಏನು ಎಂದು ಶಿಕ್ಷಕರು, ಪೋಷಕರು, ಶಾಲೆಗಳು ಪ್ರಶ್ನಿಸಲಾರಂಭಿಸುತ್ತವೆ – ಹಾಗೂ ಇದೇ ನಾವು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ತಾಯಿಬೇರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಡೆಸಿದ ಸಾಧನೆ ಕುರಿತ ಕೆಲವು ಮಹತ್ತರವಲ್ಲದ ಬೃಹತ್ ಪ್ರಮಾಣದ ಅಧ್ಯಯನಗಳು ಸಾಮಾನ್ಯವಾಗಿ ಶೇಕಡಾವಾರು ಅಂಕಗಳನ್ನು ಆಧರಿಸಿ ಒಟ್ಟಾರೆ ಶ್ರೇಣಿ ನೀಡುವ ಉದ್ದೇಶವನ್ನು ದಾಟಿ ಹೋಗಿಲ್ಲ. ಆದರೆ, ಕಲಿಕೆಯ ಗುಣಮಟ್ಟದ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ಮತ್ತು ಪರಿಹಾರಾತ್ಮಕ ಕ್ರಮಗಳನ್ನು ರೂಪಿಸ ಬೇಕಾದರೆ ಮಕ್ಕಳು ಎಷ್ಟು ಕಲಿತಿದ್ದಾರೆ ಮತ್ತು ಏನೇನು ಕಲಿತಿಲ್ಲ ಎಂಬುದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳ ಬೇಕಾಗುತ್ತದೆ. ಸಂಪನ್ಮೂಲಗಳ ಬಳಕೆಯ ಗುರಿಯನ್ನು ಅತ್ಯುತ್ತಮಗೊಳಿಸಲು ಆಡಳಿತಗಾರರಿಗೆ ವಿದ್ಯಾರ್ಥಿಗಳ, ಶಾಲೆಗಳ ಮತ್ತು ಶಿಕ್ಷಕರುಗಳ ಬಗ್ಗೆ ಹೆಚ್ಚು ನಿಖರವಾದ ಮತ್ತು ಸಕಾಲಿಕವಾಗಿ ಪ್ರಮುಖ ಶೈಕ್ಷಣಿಕ ನಿರ್ವಹಣೆಯ ದತ್ತಾಂಶಗಳು ಬೇಕಾಗುತ್ತದೆ. ನಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ನಮ್ಮೆಲ್ಲರ ಸಾಮೂಹಿಕ ಪ್ರಯತ್ನಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಒದಗಿಸುವಂತಹ ಕೆಲವು ಮೂಲಭೂತ ಪ್ರಶ್ನೆಗಳ ಬಗ್ಗೆ ಒಳನೋಟಗಳನ್ನು ಮತ್ತು ಸೂಕ್ಷ್ಮಾತಿ ಸೂಕ್ಷ್ಮವಾದ ಮಾಹಿತಿಗಳನ್ನು ಸಂಪೂರ್ಣ ಶೈಕ್ಷಣಿಕ ವ್ಯವಸ್ಥೆಯ ಉದ್ದಗಲಕ್ಕೂ ತಲುಪಿಸುವಂತಹ ಬೃಹತ್ ಪ್ರಮಾಣದ ನಿರ್ಣಾಯಕ ಕಲಿಕಾನಿರ್ಧರಣೆಗಳ ಆವಶ್ಯಕತೆ ಇದೆ.

| 'ಗುಣೋತ್ಸವ' ಕಲಿಕಾನಿರ್ಧರಣೆಗಳು | ಅವು ನಿರ್ವಹಿಸುವ ಪಾತ್ರ _... |
|---|---|
| ಸ್ವ ಕಲಿಕಾನಿರ್ಧರಣೆ (ಎಸ್ಎ) | • ಕಲಿಕಾ ಫಲಗಳ ಪ್ರಾಮುಖ್ಯತೆ ಮತ್ತು ಅದಕ್ಕಾಗಿರುವ ಬದ್ಧತೆಯನ್ನು ಶಿಕ್ಷಕರಿಗೆ ಮತ್ತು ದೊಡ್ಡ ಪ್ರಮಾಣದಲ್ಲಿರುವ ಶೈಕ್ಷಣಿಕ ಸಮುದಾಯಕ್ಕೆ ಮುಟ್ಟಿಸುವುದು.<br>• ತನ್ನ ತರಗತಿಯಲ್ಲಿರುವ ಸಾಧನಾ ಮಟ್ಟಗಳ ಬಗ್ಗೆ ಶಿಕ್ಷಕರಿಗೆ ಆರ್ಥೈಕೆಯನ್ನು ಒದಗಿಸುವುದು.<br>• ಎಲ್ಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಒಳಗೊಳ್ಳುವುದು. |
| ಅಧಿಕಾರಿಗಳಿಂದ ಕಲಿಕಾನಿರ್ಧರಣೆ (ಓಎ) | • ಗಂಭೀರತೆಯ ಸೂಚನೆಯನ್ನು ಶೈಕ್ಷಣಿಕ ಸಮುದಾಯಕ್ಕೆ ನೀಡುವುದು.<br>• **ಶಿಕ್ಷಣದ ಹಿರಿಯ ಅಧಿಕಾರಿಗಳನ್ನು ತೊಡಗಿಸಿಕೊಳ್ಳುವಿಕೆ ಮತ್ತು ತಳಮಟ್ಟದಲ್ಲಿರುವ ಪ್ರಮುಖ ಸಮಸ್ಯೆಗಳನ್ನು ಅರ್ಥಮಾಢಿಕೊಳ್ಳುವುದು.** |
| ನೈದಾನಿಕ ಕಲಿಕಾನಿರ್ಧರಣೆ | • ಕಲಿಕೆಯಲ್ಲಿ ಕೊರತೆಗಳು, ಸಾಮಾನ್ಯ ತಪ್ಪುಗಳು, ತಪ್ಪು ಗ್ರಹಿಕೆಗಳು, ಸಮರ್ಥ ಮತ್ತು ದುರ್ಬಲ ಸಾಮರ್ಥ್ಯಗಳ ಬಗ್ಗೆಯ ಕಾರ್ಯಕ್ಕೈಗೊಳ್ಳಬಹುದಾದ ಹಿಮ್ಮಾಹಿತಿ. (ಉದಾಹರಣೆಗೆ: ತರಗತಿ ಐದಕ್ಕೆ ಗಣಿತದಲ್ಲಿನ ಭಿನ್ನರಾಶಿಗಳು ಮತ್ತು ದಶಮಾಂಶಗಳು ದುರ್ಬಲ ಕೌಶಲ).<br>• ಸುಧಾರಣೆಯನ್ನು ಗುರುತಿಸುವುದು, ವಾರ್ಷಿಕ ಮಟ್ಟದಲ್ಲಿಯಾದರೂ ಇದನ್ನು ಮಾಡಲು ಅತಿ ಕಟ್ಟುನಿಟ್ಟಿನ ವಿಧಾನ.<br>• **ತರಬೇತಿ ಹೊಂದಿದ ಮೌಲ್ಯಮಾಪಕರಿಂದ ವಸ್ತುನಿಷ್ಠ ಮತ್ತು ನಿಯಂತ್ರಿತ ಪರೀಕ್ಷಾ ಪ್ರಕ್ರಿಯೆ.**<br>• **ಪ್ರಶ್ನಾವಾರು ಹಿಮ್ಮಾಹಿತಿಯೊಂದಿಗೆ ಸಂಪೂರ್ಣಾವಧಿಯ ಪರೀಕ್ಷೆಗಳು.**<br>• **ಪ್ರತಿನಿಧಿ ಸಮೂನೆಯು ಕಡಿಮೆ ವೆಚ್ಚ ಮತ್ತು ಪ್ರಯತ್ನದಲ್ಲಿ ತೀವ್ರತೆಯನ್ನು ಒದಗಿಸುತ್ತದೆ (ಓಎನಲ್ಲಿನ 1/10ರಷ್ಟು ಪ್ರಮಾಣ).** |

ಈ ಲೇಖನವು ಗುಜರಾತ್ ಸರ್ಕಾರದ ಪ್ರಯತ್ನವಾದ ಬೃಹತ್ ಪ್ರಮಾಣದ ಶೈಕ್ಷಣಿಕ ಸುಧಾರಣಾ ಕ್ರಮಗಳಿಗಾಗಿ, ಎಜುಕೇಷನಲ್ ಇನಿಷಿಯೇಟಿವ್ಸ್‌ರವರು (ಇಐ) ನಡೆಸಿದ ವಿದ್ಯಾರ್ಥಿ–ಕಲಿಕೆಯ ಫಲಿತಾಂಶದ ವೈಯಕ್ತಿಕ ನೈದಾನಿಕ ಕಲಿಕಾನಿರ್ಧರಣೆಯನ್ನು ಆಧರಿಸಿದೆ.


**ಗುಜರಾತ್‌ನ ಕಲಿಕಾನಿರ್ಧರಣೆಯ ಕ್ರಮಗಳು:** ತನ್ನ ರಾಜ್ಯದಲ್ಲಿನ ಮಕ್ಕಳ ಕಲಿಕೆಯು ಗುಣಮಟ್ಟದ್ದಾಗಿರಬೇಕೆಂದು ಮನಗಂಡ ಗುಜರಾತ್‌ರಾಜ್ಯವು, ಕಲಿಕೆಯಲ್ಲಿ ಎಲ್ಲೆಲ್ಲಿ ಕೊರತೆ ಇದೆ ಮತ್ತು ಸುಧಾರಣೆಯನ್ನು ಮಾಡಲು ಎಲ್ಲೆಲ್ಲಿ ಹೆಚ್ಚಿನ ಗಮನ ನೀಡಬೇಕು ಎಂಬುದನ್ನು ಅರಿಯುವ ದೃಷ್ಟಿಯಿಂದ ಕಲಿಕಾ ಫಲಗಳ ಒಂದು ಸ್ವಾಯತ್ತ ಮೌಲ್ಯಮಾಪನವಾದ ಆರ್‌ಟಿಇ ನಿಯಮಗಳನ್ನು ಜಾರಿಗೊಳಿಸಿದ ಭಾರತದ ಮೊದಲ ರಾಜ್ಯವಾಗಿದೆ. ಸರ್ಕಾರಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಉತ್ತಮ ವಾಗಿರುವಂತೆ ನೋಡಿಕೊಳ್ಳಲು ಮತ್ತು ಶೈಕ್ಷಣಿಕ ಸಮುದಾಯದಲ್ಲಿ ಗುಣಮಟ್ಟದ ಬಗ್ಗೆ ಅರಿವನ್ನು ಹೆಚ್ಚಿಸಲು, ಗುಜರಾತ್‌ನ ಉಪಕ್ರಮದ ಒಂದು ಭಾಗವಾಗಿ **'ಗುಣೋತ್ಸವ'**ವನ್ನು ಸರ್ಕಾರವು ನಡೆಸುತ್ತಿದೆ. ಇದು ಗುಣಮಟ್ಟವನ್ನು ಸುಧಾರಿಸುವ ಕಾರ್ಯಕ್ರಮವಾಗಿದ್ದು, 2009ರಿಂದ ಪ್ರಾರಂಭಿಸಿ, ಪ್ರತಿ ವರ್ಷ ಈ ಸಂಬಂಧ ವಿದ್ಯಾರ್ಥಿಗಳ ಮೌಲ್ಯಮಾಪನವನ್ನು ಮಾಡಲಾಗುತ್ತದೆ. ಗುಜರಾತ್‌ನಲ್ಲಿರುವ 33,900 ಪ್ರಾಥಮಿಕ ಶಾಲೆಗಳಲ್ಲಿ ಪ್ರಸ್ತುತ ಗುಣೋತ್ಸವ ಕಾರ್ಯಕ್ರಮವನ್ನು ಬೆಂಬಲಿಸಲು, 2011 ರಿಂದ, **ಇಐ** ತನ್ನನ್ನು ತೊಡಗಿಸಿಕೊಂಡಿದೆ. ಪ್ರತಿ ವರ್ಷ ಗುಣೋತ್ಸವವನ್ನು ಎರಡು ಹಂತಗಳಲ್ಲಿ ನಡೆಸಲಾಗುತ್ತದೆ. ಮೊದಲ ಹಂತದಲ್ಲಿ (ಸ್ವ ಕಲಿಕಾನಿರ್ಧರಣೆ) ಶಾಲೆಯಲ್ಲಿನ ಶಿಕ್ಷಕರು ಕಲಿಕಾನಿರ್ಧರಣೆಯನ್ನು ನಡೆಸುತ್ತಾರೆ. ಎರಡನೆಯ ಹಂತದಲ್ಲಿ (ಅಧಿಕಾರಿಗಳ ಕಲಿಕಾನಿರ್ಧರಣೆ), ಅಧಿಕಾರಿಗಳು (ಮಂತ್ರಿಗಳು, ಐಎಎಸ್, ಐಪಿಎಸ್, ಐಎಫ್‌ಎಸ್ ಮತ್ತು ಇನ್ನಿತರ 1–2ನೇ ದರ್ಜೆಯ ಅಧಿಕಾರಿಗಳು) 25% ಪ್ರಾಥಮಿಕ ಶಾಲೆಗಳಲ್ಲಿ ಕಲಿಕಾನಿರ್ಧರಣೆಗಳನ್ನು ನಡೆಸುತ್ತಾರೆ. ಸ್ವಯಂ ಮತ್ತು ಅಧಿಕಾರಿ ಕಲಿಕಾನಿರ್ಧರಣೆಗಾಗಿ, ಇಐ 20% ಉನ್ನತ ಮಟ್ಟದ ಪರೀಕ್ಷಾ ವಸ್ತುಗಳನ್ನು ಕೊಡುಗೆಯಾಗಿ ನೀಡುತ್ತದೆ ಮತ್ತು ಗುಣೋತ್ಸವದ ಎಲ್ಲಾ ದತ್ತಾಂಶಗಳ ವಿಶ್ಲೇಷಣೆಯನ್ನು ಮಾಡುತ್ತದೆ. ಇದರೊಟ್ಟಿಗೆ, "ವಿದ್ಯಾರ್ಥಿಗಳು ಎಷ್ಟು ಚೆನ್ನಾಗಿ ಕಲಿಯುತ್ತಾರೆ" (ಕಲಿಕಾ ಸಾಧನೆಗಳು, ಕೊರತೆಗಳು ಮತ್ತು ತಪ್ಪುಗ್ರಹಿಕೆಗಳು) ಎಂಬುದನ್ನು ಅರಿಯಲು ಗುಜರಾತ್‌ನ 26 ಜಿಲ್ಲೆಗಳಲ್ಲಿರುವ 3, 5, 7 ಮತ್ತು 9ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳ ಪ್ರಾತಿನಿಧಿಕ ನಮೂನೆಯ ಮೇಲೆ ಕಲಿಕಾ ಮಟ್ಟದ ಸವಿವರವಾದ, ವೈಜ್ಞಾನಿಕವಾದ ನೈದಾನಿಕ ಕಲಿಕಾನಿರ್ಧರಣೆಯನ್ನು **ಇಐ** ಮಾಡುತ್ತದೆ

**ಪರೀಕ್ಷಾ ವಿನ್ಯಾಸ:** ನೈದಾನಿಕ ಕಲಿಕಾನಿರ್ಧರಣೆಯ ಉದ್ದೇಶ, ವಿದ್ಯಾರ್ಥಿ ಕಲಿಕೆಯಲ್ಲಿನ ಸಾಮರ್ಥ್ಯಗಳು ಮತ್ತು ದುರ್ಬಲತೆಗಳ ವಿವರವಾದ ನೈದಾನಿಕ ದೃಶ್ಯವನ್ನು ನೀಡುವುದಾಗಿದೆ. ಪರೀಕ್ಷೆಗಳು ನಿಜವಾಗಿಯೂ ನೈದಾನಿಕವಾಗಬೇಕಾದಲ್ಲಿ, (1) ಗಮನಾರ್ಹವಾದ, ಉನ್ನತ ಆದ್ಯತೆಯ ಜ್ಞಾನಾತ್ಮಕ ಕೌಶಲಗಳನ್ನು ಅಥವಾ ಅರಿವಿನ ಮಜಲುಗಳನ್ನು ಅಲ್ಪ ಪ್ರಮಾಣದಲ್ಲಾದರೂ ಅಳೆಯುವಂತಿರಬೇಕು (2) ಪರೀಕ್ಷಾರ್ಥಿಗೆ ಆ ಕೌಶಲದಲ್ಲಿರುವ ಪರಿಣಿತಿಯನ್ನು ಸಾಧ್ಯವಾದಷ್ಟು ನಿಖರವಾಗಿ ನಿರ್ಧರಿಸಲು ಶಿಕ್ಷಕರಿಗೆ ಸಹಾಯಕವಾಗುವಂತೆ, ಅಳೆಯಲಾಗುವ ಪ್ರತಿ ಸಾಮರ್ಥ್ಯಕ್ಕೂ ಸಾಕಷ್ಟು ಅಂಶಗಳನ್ನು ಒಳಗೊಂಡಿರಬೇಕು; (3) ಪರೀಕ್ಷೆಯು ಏನನ್ನು ಅಳೆಯುತ್ತಿದೆ ಎಂಬುದನ್ನು ಸ್ಪಷ್ಟವಾಗಿ ವಿವರಿಸಬೇಕು ಮತ್ತು (4) ವಿಪರೀತ ಕ್ಲಿಷ್ಟವಾಗಿ ಅಥವಾ ಹೆಚ್ಚಿನ ಸಮಯ ತೆಗೆದುಕೊಳ್ಳುವಂತೆ ಇರಬಾರದು.

**ಗುಜರಾತ್‌ನಲ್ಲಿನ ನೈದಾನಿಕ ಕಲಿಕಾನಿರ್ಧರಣೆಯ ಅಧ್ಯಯನದ ಪ್ರಮುಖ ಲಕ್ಷಣಗಳು**

- **ವ್ಯಾಪ್ತಿ:** ಮಾದರಿಗಾಗಿ ಉಪಯೋಗಿಸಲಾದ 26 ಜಿಲ್ಲೆಗಳ 1114 ಶಾಲೆಗಳಲ್ಲಿನ 1.3 ಲಕ್ಷ ವಿದ್ಯಾರ್ಥಿಗಳು. (ಪ್ರತಿ ಜಿಲ್ಲೆಯಲ್ಲಿನ ಪ್ರತಿ ವರ್ಗದ 1000 ವಿದ್ಯಾರ್ಥಿಗಳು)
- **ವಿಷಯಗಳು:** ಗುಜರಾತಿ, ಗಣಿತ, ಪರಿಸರವಿಜ್ಞಾನ (ವರ್ಗಗಳು 3, 5); ಗುಜರಾತಿ, ಗಣಿತ, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ವಿಜ್ಞಾನ, ಇಂಗ್ಲೀಷ್ (ವರ್ಗಗಳು 7 ಮತ್ತು 9)
- ವೈಜ್ಞಾನಿಕವಾಗಿ ವಿನ್ಯಾಸಗೊಳಿಸಲಾಗಿರುವ **ಪರೀಕ್ಷಾ ಅಭಿವೃದ್ಧಿ ಚಕ್ರ**.
- ರಾಷ್ಟ್ರೀಯ ಮಾನದಂಡದೊಂದಿಗೆ **ವಿಶೇಷವಾಗಿ ರಚಿಸಲಾಗಿರುವ ಪ್ರಶ್ನಪತ್ರಿಕೆಗಳು**.
- **ತರಬೇತಿ ಹೊಂದಿರುವ** ಪರೀಕ್ಷಾ ಆಡಳಿತಗಾರರು ಮತ್ತು ಮೌಲ್ಯಮಾಪಕರು
- ಪರೀಕ್ಷೆಯ ಗುಣಮಟ್ಟ ಮತ್ತು ನ್ಯಾಯಪರತೆಯನ್ನು ತನಿಖೆಮಾಡಲು **ಕ್ಷೇತ್ರ ಪರಿಶೋಧನೆ**.
- ಐಟಂ ರೆಸ್ಪಾಂಸ್ ಥಿಯರಿಯಂತಹ (ಐಆರ್‌ಟಿ) ಆಧುನಿಕ ತಂತ್ರವನ್ನು ಬಳಸಿ **ವಿಶ್ಲೇಷಣೆ**.
- **ರಾಜ್ಯಗಳಿಗೆ ಮತ್ತು ಪ್ರತಿ ಜಿಲ್ಲೆಗೂ ವರದಿಗಳು**.
- ಪ್ರತಿ ವಿಷಯ ಮತ್ತು ತಪ್ಪು ಉತ್ತರಗಳ ಮಟ್ಟದಲ್ಲಿ ಬಿಡಿ ದತ್ತಾಂಶಗಳನ್ನು ಪಡೆದುಕೊಳ್ಳಬಹುದಾದ **ವಿಶೇಷ ಅಂತರ್ಜಾಲ ತಾಣ**.
- **ವಿದ್ಯಾರ್ಥಿಗಳಿಗಿರುವ ತಪ್ಪುಗ್ರಹಿಕೆಗಳ ಬಗ್ಗೆ ಸಂಶೋಧನೆಯನ್ನು ಮಾಡಬಹುದಾದ ವಿಡಿಯೋ ಸಂದರ್ಶನಗಳು**
- ಪರೀಕ್ಷೆಗಳ ತಯಾರಿ, ಪರೀಕ್ಷೆ ನೀಡಲು ಪರಿಣಿತ ತರಬೇತಿ, ಕ್ಷೇತ್ರ ಪರಿಶೋಧನೆಗಳು, ದತ್ತಾಂಶ ಆದಾನ, **EIರವರಿಂದ** ವಿಶ್ಲೇಷಣೆ ಮತ್ತು ವರದಿಗಳು; **ಗುಜರಾತ್ ಸರ್ಕಾರದಿಂದ** ಪರೀಕ್ಷಾ ನೀಡಿಕೆ ಮತ್ತು ವ್ಯವಸ್ಥೆ.
- ಕಲಿಕಾನಿರ್ಧರಣೆಗಳ ನಿರ್ಮಾಣ ಮತ್ತು ಬಳಕೆಯಲ್ಲಿ ರಾಜ್ಯ ಮತ್ತು ಜಿಲ್ಲಾ ಸಿಬ್ಬಂದಿಗಳಿಗೆ **ಸಾಮರ್ಥ್ಯ ನಿರ್ಮಾಣದ ಕಾರ್ಯಾಗಾರ**.
- ಶೈಕ್ಷಣಿಕ ಅಧಿಕಾರಿಗಳು ಮತ್ತು ಶಿಕ್ಷಕರಿಗೆ **ತದನಂತರ–ವಿಶ್ಲೇಷಣೆ ಪ್ರಸರಣ ಕಾರ್ಯಾಗಾರಗಳು**.

ಹಿಂದಿನ ಅನುಭವಗಳ ಪ್ರಕಾರ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು, ವಿಶೇಷವಾಗಿ ಕೆಳಗಿನ ತರಗತಿಯಲ್ಲಿರುವವರು ಓದುವಾಗ ಕಷ್ಟಪಡುತ್ತಾರೆ. ಹೀಗಾಗಿ, ಅವರ ಓದುವಿಕೆಯ ಸಮಸ್ಯೆಯಿಂದ ಬಾಧಿತವಾಗದೆ, ಒಟ್ಟಾರೆ ನಿರ್ವಹಣೆಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು, **ಇಐ** ಎರಡು ಘಟಕಗಳನ್ನು ನೈದಾನಿಕ ಪರೀಕ್ಷಾ ಪತ್ರಿಕೆಗಳಲ್ಲಿ ಪರಿಚಯಿಸಿದೆ. ಅವುಗಳೆಂದರೆ, 'ಬರೆಯುವುದು' ಮತ್ತು 'ಸಮೂಹ ಮೌಖಿಕ.' ಬರೆಯುವ ಪರೀಕ್ಷೆಯು, ವಿದ್ಯಾಥಿಗಳು ತಾವೇ ಓದಿಕೊಂಡು ಉತ್ತರಿಸುವ ವಿಷಯಗಳನ್ನು ಹೊಂದಿದೆ. 'ಸಮೂಹ ಮೌಖಿಕ' ಪರೀಕ್ಷೆಯಲ್ಲಿ, ಪರೀಕ್ಷಕರು ಇಡೀ ಗುಂಪಿಗೆ, ಎರಡು ಬಾರಿ ಮೌಖಿಕವಾಗಿ ಪ್ರಶ್ನೆಗಳನ್ನು ಓದುತ್ತಾರೆ (ಒಮ್ಮೆಗೆ ಒಂದು ಪ್ರಶ್ನೆಯಂತೆ ಓದಿ, ವಿದ್ಯಾರ್ಥಿಗಳಿಗೆ ಉತ್ತರ ಬರೆಯಲು ಸಮಯವನ್ನು ನೀಡಲಾಗುವುದು) ಹಾಗೂ ವಿದ್ಯಾರ್ಥಿಗಳಿಗೆ ತಮ್ಮ ಪರೀಕ್ಷಾ ಪತ್ರಿಕೆಯಲ್ಲಿ ಆ ಪ್ರಶ್ನೆಗಳಿಗೆ ತಮ್ಮ ಉತ್ತರಗಳನ್ನು ಬರೆಯಲು ಅವಕಾಶ ನೀಡಲಾಗುತ್ತದೆ. ಗುಜರಾತ್‌ನ ನೈದಾನಿಕ ಕಲಿಕಾನಿರ್ಧರಣೆಗಳಲ್ಲಿ, ಮೂರನೇ ತರಗತಿಯ ಭಾಷೆ ಮತ್ತು ಗಣಿತದ ವಿಷಯದಲ್ಲಿ ಮಾತ್ರ 'ಸಮೂಹ ಮೌಖಿಕ' ಪ್ರಶ್ನೆಗಳು ಇದ್ದವು. ಪತ್ರಿಕೆಗಳನ್ನು ವಿವರವಾದ ಸಾಮರ್ಥ್ಯದ ಕಾರ್ಯಚೌಕಟ್ಟು ಮತ್ತು ಎನ್‌ಸಿಎಫ್, ಎಂಎಲ್‌ಎಲ್‌ರವರ ಮತ್ತು ರಾಜ್ಯ ಮಂಡಳಿಯ ಪಠ್ಯಪುಸ್ತಕಗಳು, ಅಂತಾರಾಷ್ಟ್ರೀಯ ಗುಣಮಟ್ಟದ ಕಾರ್ಯಚೌಕಟ್ಟು ಮತ್ತು ಇಐರವರ ರಾಷ್ಟ್ರೀಯ ಮಾನದಂಡ ಅಧ್ಯಯನಗಳಿಂದ ಪಡೆದ ಅಂಶಗಳನ್ನು ಅವಲಂಬಿಸಿ ವಿನ್ಯಾಸಗೊಳಿಸಲಾಗುತ್ತದೆ. ಪರೀಕ್ಷೆಗಳು ಜ್ಞಾನವನ್ನು ಪರೀಕ್ಷಿಸುವುದಕ್ಕೆ ಮಾತ್ರ ಪ್ರಶ್ನೆಗಳನ್ನು ಒಳಗೊಂಡಿರದೆ (ಸ್ಮರಣೆ ಮತ್ತು ಕ್ರಮ) ವಿಷಯ ಮನಗಂಡಿರುವುದು ಹಾಗೂ ಉನ್ನತ ಮಟ್ಟದ ಕೌಶಲಗಳಾದ ಕಾರಣ ನೀಡುವಿಕ ಹಾಗೂ ಅನ್ವಯಿಸುವಿಕೆಯ ಪರಿಕಲ್ಪನೆಗಳನ್ನೂ ಒಳಗೊಂಡಿರುತ್ತದೆ. ಪತ್ರಿಕೆಗಳಲ್ಲಿನ ದತ್ತಭಾಗಗಳು (ಪ್ಯಾಸೇಜ್) ಹಿಂದೆ ನೋಡಿರದ ಪಠ್ಯಭಾಗಗಳಾಗಿದ್ದು ದೈನಂದಿನ ಜೀವನದಲ್ಲಿ ಕಂಡುಬರುವ ಅಧಿಕೃತ ವಿಷಯಗಳಾಗಿರುತ್ತವೆ, ಅಂದರೆ, ತಮ್ಮ ನಿರ್ದಿಷ್ಟ ತರಗತಿಗಳಲ್ಲಿ ತಾವು ಕಲಿತಿರುವ ಪರಿಕಲ್ಪನೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಇರುವ ನಿಜವಾದ ಅರಿವನ್ನು ಪರೀಕ್ಷಿಸುವಂತಿರುತ್ತದೆ. ಖಾಸಗಿ ಶಾಲೆಗಳಿಗಾಗಿ **ಇಐ**ರವರ ರಾಷ್ಟ್ರೀಯ ಕಲಿಕಾನಿರ್ಧರಣೆ 'ಎಎಸ್‌ಎಸ್‌ಇಟಿ' 'ASSET' ಪತ್ರಿಕೆಯಲ್ಲಿರುವಂತಹ ಪ್ರಶ್ನೆಗಳನ್ನು ತುಲನಾತ್ಮಕ ಕಲಿಕೆಮಟ್ಟ ಗುರುತಿಸುವುದಕ್ಕಾಗಿ ಸೇರಿಸಲಾಗಿರುತ್ತದೆ. ಪರೀಕ್ಷೆಗಳನ್ನು ಸುಲಭ ಮತ್ತು ಸರಳವಾಗಿ ನಡೆಸಲು ಅನುಕೂಲವಾಗುವಂತೆ ಪ್ರಶ್ನೆಗಳನ್ನು ಬಹು ಆಯ್ಕೆ ಪ್ರಶ್ನೆಗಳ ಮಾದರಿಯಲ್ಲಿ ರೂಪಿಸಲಾಗಿರುತ್ತದೆ.

| ಕ್ರ. ಸಂ. | ಸಾಂಪ್ರದಾಯಿಕ ಮಾದರಿ | ಅದೇ ಪರಿಕಲ್ಪನೆಯನ್ನು ಪರೀಕ್ಷಿಸುವ ಬದಲೀ ಸ್ವರೂಪ - 'ಅರ್ಥಮಾಡಿಕೊಂಡು ಕಲಿಕೆ'ಯ ಪರೀಕ್ಷೆ |
|---|---|---|
| 1. | 6/9 ರ ಕುಗ್ಗಿದ ಸ್ವರೂಪ ಯಾವುದು? | **ಪ್ರತಿ ಚಿತ್ರವೂ ಒಂದು ಭಿನ್ನರಾಶಿಯನ್ನು ಪ್ರತಿನಿಧಿಸುತ್ತದೆ.**  1 2 3 4 **ಯಾವ ಎರಡು ಚಿತ್ರಗಳು ಒಂದೇ ಭಿನ್ನರಾಶಿಯನ್ನು ಪ್ರತಿನಿಧಿಸುತ್ತಿವೆ?** ಎ) 1 ಮತ್ತು 3 ಬಿ) 1 ಮತ್ತು 4 ಸಿ) 2 ಮತ್ತು 3 **ಡಿ)** 3 ಮತ್ತು 4 |
| | | 1b. 2/7ಕ್ಕಿಂತ ದೊಡ್ಡದಾದ ಒಂದು ಭಿನ್ನರಾಶಿಯನ್ನು ಬರೆಯಿರಿ |
| 2. | ಕೂಡಿಸಿ: 7.234 + 21.34 | 2a. ಈ ಸಂಖ್ಯೆಗಳಲ್ಲಿ ಯಾವುದು 423.1 ಕ್ಕೆ ಅತ್ಯಂತ ಸಮೀಪವಾದದ್ದು? ಎ) 4231 ಬಿ) 4.23 ಸಿ) 42.3 ಡಿ) 423 **ಡಿ) 423** |
| | | 2b. ಈ ಸಂಖ್ಯೆಗಳಲ್ಲಿ ಯಾವುದು ದೊಡ್ಡದು? ಎ) 7.234 ಬಿ) 6.1 ಸಿ) .4999 ಡಿ) 21.34 **ಡಿ) 21.34** |

**ಸಂವಾದ ಮತ್ತು ಬದಲಾವಣೆಗಾಗಿ ಅರ್ಥಪೂರ್ಣ ವಿಶ್ಲೇಷಣೆ:** ವಿವಿಧ ಗುಂಪುಗಳ ಕಲಿಕೆ ಪ್ರಗತಿಯ ವಿನ್ಯಾಸಗಳನ್ನು ಹೊರತೆಗೆಯಲು ಮತ್ತು ಕಲಿಕಾ ಮಟ್ಟದಲ್ಲಿನ ವಿಭಿನ್ನತೆಗಳನ್ನು ಅರಿಯಲು ಸಂಗ್ರಹಿಸಲಾದ ದತ್ತಾಂಶಗಳ ಮೇಲೆ ಬೇರೆಯದೇ ಆದ ರೀತಿಯ ವಿಶ್ಲೇಷಣೆಗಳನ್ನು ನಡೆಸಲಾಯಿತು. ಕಲಿಕೆಯ ವಿವಿಧ ವಿನ್ಯಾಸಗಳನ್ನು ಪರೀಕ್ಷಿಸಲು ಆಧುನಿಕ ಸಂಖ್ಯಾಶಾಸ್ತ್ರದ ವಿಧಾನಗಳನ್ನು ಬಳಸಲಾಯಿತು. ತಪ್ಪುಗ್ರಹಿಕೆಗಳನ್ನು ಮತ್ತು ಸಾಮಾನ್ಯ ದೋಷಗಳನ್ನು ಗುರುತಿಸಲು ಸರಿಯಂತೆ ಕಾಣುವ ತಪ್ಪುಉತ್ತರಗಳ ವಿಶ್ಲೇಷಣೆಯು ಸಹಾಯಕವಾಯಿತು. ಮುಂದಿನ ಹಂತದಲ್ಲಿ, ಸ್ಪಷ್ಟ, ಗುರಿ ನಿರ್ಧರಿತ ಕಾರ್ಯ ಯೋಜನೆಯನ್ನು ಕೈಗೊಳ್ಳಲು ವಿಶ್ಲೇಷಣೆಯು, ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಮಾಹಿತಿಯನ್ನು ಒದಗಿಸಿತು. ಇದು ರಾಜ್ಯದಲ್ಲಿನ ವಿವಿಧ ಜಿಲ್ಲೆಗಳು/ವಲಯಗಳಲ್ಲಿನ ಮಕ್ಕಳ ಕಲಿಕೆ ಪ್ರಗತಿಯ ಬಗ್ಗೆ ಉಪಯುಕ್ತವಾದ ತುಲನಾತ್ಮಕ ದತ್ತಾಂಶಗಳನ್ನು ಒದಗಿಸಿತು. ಇತರ ರಾಜ್ಯಗಳು ಮತ್ತು ರಾಷ್ಟ್ರೀಯ ಮಾನದಂಡದ ಅಧ್ಯಯನಗಳೊಂದಿಗೆ ತುಲನಾತ್ಮಕ ವಿಶ್ಲೇಷಣೆಯ ದತ್ತಾಂಶಗಳೂ ಲಭ್ಯವಿದೆ. ವಿದ್ಯಾರ್ಥಿ ಕಲಿಕೆಯ ಮೇಲೆ ಆತನ ವಿಭಿನ್ನ ಹಿನ್ನಲೆಯ ಪರಿಣಾಮದ ಅಂಶಗಳನ್ನು ಗುರುತಿಸಲಾಯಿತು.

**ವರದಿಗಳು**: ವರದಿಗಳು ರಾಜ್ಯಮಟ್ಟದ ನೀತಿ-ತಯಾರಕರನ್ನು ಉದ್ದೇಶಿಸಿದ್ದಾಗಿತ್ತು, ಹಾಗೂ, ಪ್ರತಿ ಜಿಲ್ಲೆಗೂ ವರದಿಗಳನ್ನು ನೀಡಲಾಯಿತು. ಜಿಲ್ಲಾ ವರದಿಗಳನ್ನು ಪ್ರತಿ ಜಿಲ್ಲಾ ವಿದ್ಯಾಧಿಕಾರಿಗೆ ನೀಡಲಾಯಿತು ಮತ್ತು ಇದು ಅವರಿಗೆ, ಪ್ರತಿ ಪರೀಕ್ಷೆಯಲ್ಲೂ ಜಲ್ಲೆಯಲ್ಲಿನ ಒಟ್ಟಾರೆ ನಿರ್ವಹಣೆಯ, ರಾಜ್ಯದ ನಿರ್ವಹಣೆ, ಪ್ರತಿ ಅಂಕ ಪಟ್ಟಿಯೊಳಗೆ ಬರುವ ವಿದ್ಯಾರ್ಥಿಗಳ ಶೇಕಡಾವರು ಸಂಖ್ಯೆ, ಇತರ ಜಿಲ್ಲೆಗಳ ನಿರ್ವಹಣೆಯೊಂದಿಗಿನ ತುಲನಾತ್ಮಕ ವಿವರಣೆ, ಪ್ರತಿ ಪರೀಕ್ಷೆಯಲ್ಲಿನ ಸುಸಮರ್ಥ ಮತ್ತು ದುರ್ಬಲ ಸಾಮರ್ಥ್ಯಗಳು, ಉನ್ನತ ನಿರ್ವಹಣೆಯ ಮತ್ತು ಕನಿಷ್ಠ ನಿರ್ವಹಣೆಯ ಪ್ರಶ್ನೆಗಳು, ಪ್ರತಿ ವಿಷಯದಲ್ಲೂ ಸುಧಾರಣೆಗಾಗಿನ ವಿವರವಾದ ಶಿಫಾರಸ್ಸುಗಳನ್ನು ಒಳಗೊಂಡಂತಹ ಪಕ್ಷಿನೋಟವನ್ನು ಒದಗಿಸಿತು.

**ಸಾಮರ್ಥ್ಯ ನಿರ್ಮಾಣ ಮತ್ತು ತಂತ್ರಗಳ ಪ್ರಸರಣೆ:** ರಾಜ್ಯ, ಜಿಲ್ಲೆ ಮತ್ತು ಶಾಲಾ ಮಟ್ಟಗಳಲ್ಲಿ ಒಟ್ಟಾರೆ ರೂಪದಲ್ಲಿರುವ ದತ್ತಾಂಶಗಳು ದೊರಕುವಂತೆ ಅಂತರ್ಜಾಲ ತಾಣಗಳನ್ನು (ವೆಬ್‌ಸೈಟ್) ಅಭಿವೃದ್ಧಿಪಡಿಸಲಾಯಿತು. ಶಿಕ್ಷಕರು ಮತ್ತು ಸಂಪನ್ಮೂಲ ವ್ಯಕ್ತಿಗಳು, ಪಠ್ಯಕ್ರಮ, ಬೋಧನಾ ಶಾಸ್ತ್ರದ ಮಟ್ಟದಲ್ಲಿ ಬಳಸುವ ರೀತಿಯಲ್ಲಿ ವಿಷಯ ಮತ್ತು ಕೌಶಲ ಮಟ್ಟದಲ್ಲಿನ ನೈದಾನಿಕ ಮಾಹಿತಿಯನ್ನೂ ಒದಗಿಸಿತು. ವಿದ್ಯಾರ್ಥಿಗಳ ಕಲಿಕಾನಿರ್ಧರಣೆಗಳನ್ನು ತಯಾರಿಸಿ ಉಪಯೋಗಿಸಲು ಅನುಕೂಲವಾಗುವ ಆಧುನಿಕ ಕೌಶಲಗಳನ್ನು ರಾಜ್ಯ ಮತ್ತು ಜಿಲ್ಲಾ ಸಿಬ್ಬಂದಿಗಳಲ್ಲಿ ಬೆಳೆಸಲು ಸಾಮರ್ಥ್ಯ ನಿರ್ಮಾಣದ ಸರಣಿ ಕಾರ್ಯಾಗಾರಗಳನ್ನು ನಡೆಸಲಾಯಿತು. ಯೋಜನೆಯ ಭಾಗವಾಗಿ ಶಿಕ್ಷಕರು, ದತ್ತಾಂಶಗಳು ಒದಗಿಸುವ ಒಳನೋಟವನ್ನು ಅರ್ಥ ಮಾಡಿ ಕೊಳ್ಳಲು ಮತ್ತು ತಮ್ಮ ತರಗತಿ ಪಾಠಮಾಡುವಲ್ಲಿ ಅಳವಡಿಸಿಕೊಳ್ಳಲು ತದನಂತರದ ವಿಶ್ಲೇಷಣೆ ಮತ್ತು ಪ್ರಸರಣಾ ಕಾರ್ಯಾಗಾರಗಳು ಇದ್ದವು.

**ವಿದ್ಯಾರ್ಥಿಗಳ ವಿಡಿಯೋ ಸಂದರ್ಶನಗಳು**: ಒಂದು ಪರಿಕಲ್ಪನೆಗೆ ವಿದ್ಯಾರ್ಥಿಗಳು ನೀಡಿದ ವಿಭಿನ್ನ ತಪ್ಪು ಉತ್ತರಗಳನ್ನು ಕಲಿಕಾನಿರ್ಧರಣೆಯ ಫಲಿತಾಂಶಗಳು ಗುರುತಿಸಿದಾಗ್ಯೂ, ವಿದ್ಯಾರ್ಥಿಗಳು ಏಕೆ ಈ ರೀತಿ ಉತ್ತರಿಸಿದ್ದಾರೆ ಎನ್ನುವುದನ್ನು ವಿವರಿಸುವುದಿಲ್ಲ. ಇದನ್ನು ಕಂಡು ಹಿಡಿಯಲು, ಒಂದು ವಿಧಾನವೆಂದರೆ 'ವಿದ್ಯಾರ್ಥಿ ಸಂದರ್ಶನ'ದಲ್ಲಿ ಅವರನ್ನು ಕೇಳುವುದಾಗಿದೆ. ಈ ಸಂದರ್ಶನಗಳನ್ನು ತರಬೇತಿ ಹೊಂದಿರುವ ಸಂದರ್ಶಕರು ತರಗತಿಯಲ್ಲೇ ನಡೆಸಿದರು. ಅವುಗಳನ್ನು ವಿಡಿಯೋದಲ್ಲಿ ದಾಖಲಿಸಿಕೊಳ್ಳಲಾಯಿತು ಮತ್ತು ಅವುಗಳನ್ನು ತರುವಾಯ ಶಿಕ್ಷಕರ ತರಬೇತಿ ಮತ್ತು ಹಿಮ್ಮಾಹಿತಿಗಳಿಗೆ ಉಪಯೋಗಿಸುವಂತಹ ಶಾಲೆಗಳಿಗೆ ನೀಡಲಾಯಿತು.

**ಮುಂದಿನ ದಿನಗಳಲ್ಲಿ:** ವಿದ್ಯಾರ್ಥಿ ಕಲಿಕೆಯಲ್ಲಿನ ಪ್ರಮುಖವಾದ ಅಂತರಗಳನ್ನು ಎಲ್ಲಾ ಪಾಲುದಾರರಿಗೂ ಎತ್ತಿಹೇಳಲು ಕನಿಷ್ಠ-ಹೂಡಿಕೆಯ ನೈದಾನಿಕ ವಿದ್ಯಾರ್ಥಿ ಕಲಿಕಾನಿರ್ಧರಣೆಯು ಒಂದು ಪ್ರಬಲವಾದ ಸಾಧನ. ಉತ್ತಮವಾಗಿ ವಿನ್ಯಾಸಗೊಳಿಸಿರುವ ಕಲಿಕೆಯ ನಿರ್ಧರಣೆಯ ಸಮೀಕ್ಷೆಗಳು ಈ ಕೆಳಗಿನ ಲಕ್ಷಣಗಳನ್ನು ಹೊಂದಿರುತ್ತವೆ. ಅವುಗಳೆಂದರೆ:

- ಕೇಂದ್ರ ಮತ್ತು ರಾಜ್ಯ ಮಟ್ಟಗಳೆರಡರಲ್ಲೂ ನೀತಿ ತಯಾರಕರು ಮತ್ತು ಸಂಶೋಧಕರು ಬಳಸಿಕೊಳ್ಳಬಹುದಾದ ವಿದ್ಯಾರ್ಥಿಕಲಿಕೆಯ ಮಟ್ಟ ಗುರುತನ್ನು (Bench Mark) ಒದಗಿಸುವುದು.
- ವಿವಿಧ ರಾಜ್ಯಗಳಲ್ಲಿನ ಕಲಿಕೆ ಪ್ರಗತಿಯ ಬಗ್ಗೆ ತೌಲನಿಕ ಒಳನೋಟವನ್ನು ಒದಗಿಸುವುದು ಮತ್ತು ಮಿಶ್ರ ಕಲಿಕೆ ಹಾಗೂ ಪರಿಹಾರಾತ್ಮಕ ಅವಕಾಶಗಳನ್ನು ಒದಗಿಸುವುದು.
- ಜ್ಞಾನ ಮತ್ತು ಕೌಶಲಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿ ಕಲಿಕೆಯನ್ನು ಸ್ಥಿರಪಡಿಸುವುದು ಹಾಗೂ ಕಲಿಕೆಯಲ್ಲಿ ಕೊರತೆಗಳು, ಸಾಮಾನ್ಯ ತಪ್ಪುಗಳು ಮತ್ತು ತಪ್ಪುಗ್ರಹಿಕೆಗಳ ಬಗ್ಗೆ ಹಿಮ್ಮಾಹಿತಿಯನ್ನು ಒದಗಿಸುವುದು.
- ಹೆಚ್ಚಿನ ಸಂಶೋಧನೆಗಾಗಿ ದಿಕ್ಸೂಚಿಗಳನ್ನು ಒದಗಿಸುವುದು.
- ವ್ಯವಸ್ಥೆಯ ಮಟ್ಟದಲ್ಲಿಯೇ ಕಲಿಕಾ ಸಮಸ್ಯೆಗಳನ್ನು ಪತ್ತೆಹಚ್ಚುವುದು.

ಗುಜರಾತ್ ಗುಣಮಟ್ಟದ ಕಲಿಕಾ ಫಲಿತಾಂಶಗಳ ಮೇಲೆ ಗಮನವನ್ನು ಕೇಂದ್ರೀಕರಿಸಿ ಯಾವ ವೇಗದಲ್ಲಿ ಹೋಗಬೇಕೆಂಬುದನ್ನು ನಿಗದಿ ಪಡಿಸಿ ತಾನೇ ಉದಾಹರಣೆಯಾಗಿ ಮುನ್ನಡೆಯುತ್ತಿರುವಾಗ, ಕಲಿಕಾನಿರ್ಧರಣೆಯನ್ನು ಯಾವುದಕ್ಕಾಗಿ ಬಳಸಲಾಗುವುದು, ಘಟಕ ಪರೀಕ್ಷೆಗಳು ಮತ್ತು ಪರೀಕ್ಷೆಗಳು ಯಾಕಾಗಿ ಇವೆ ಮತ್ತು ಇವುಗಳ ಉದ್ದೇಶಗಳ ನಡುವಿನ ವಿಭಿನ್ನತೆ ಏನು, ಹಾಗೂ, ಕಲಿಕೆಯ ನೈದಾನಿಕ ನಿರ್ಧರಣೆ ಯಾತಕ್ಕಾಗಿ ಮಾಡಲಾಗುತ್ತದೆ ಎಂಬುದರೊಂದಿಗೆ ಹೋಲಿಸಿದಾಗ; ವಿಶೇಷವಾಗಿ ಕೇವಲ ಕಲಿಕೆಯನ್ನು ಅಳೆಯುವುದನ್ನು ದಾಟಿ ಹೋಗುವ ಅಗತ್ಯತೆಯನ್ನು ಕಾಣದಿದ್ದಾಗ – ಆದರೆ ಏನನ್ನು ಕಲಿತಿಲ್ಲ ಎನ್ನುವುದನ್ನು ಸರಿಪಡಿಸಲು ಮಾಹಿತಿಪೂರ್ಣ ಉಪಕ್ರಮಗಳನ್ನು ಮಾಡಲು – ಈ ಎಲ್ಲವನ್ನೂ ಅರ್ಥಮಾಡಿಕೊಂಡು ಅದರ ಬಗ್ಗೆ ಮಾಹಿತಿಪೂರ್ಣ ಚರ್ಚೆಯನ್ನು ಎಲ್ಲಾ ರಾಜ್ಯಗಳಲ್ಲಿಯೂ ನಡೆಸುವಂತೆ ಮಾಡುವುದು ಈಗ ನಮ್ಮ ಮುಂದಿರುವ ಸವಾಲಾಗಿದೆ. ಈ ಸರಣಿ ಚಕ್ರವನ್ನು ಇಲ್ಲಿಗೇ ನಿಲ್ಲಿಸುತ್ತೇನೆ ಹೀಗಾಗಿ ನಾವು ಪತ್ತೆಹಚ್ಚುವಿಕೆಯನ್ನು ದಾಟಿ ಪರಿಹಾರದೆಡೆಗೆ ಸಾಗಬಹುದು (ಬಾಂಗೇ, 2013).

***ವೈಜಯಂತಿ ಶಂಕರ್:*** *ಪ್ರಸ್ತುತ 'ಫುಲ್ ಬ್ರೈಟ್ ಫೆಲೋ' ಆಗಿ ಅಮೆರಿಕಾದಲ್ಲಿ ಅಧ್ಯಯನ ನಡೆಸುತ್ತಿದ್ದಾರೆ. ಎಜುಕೇಶನಲ್ ಇನಿಷಿಯೇಟಿವ್ಸ್‌ನ 'ಬೃಹತ್ ಪ್ರಮಾಣದ ಮೌಲ್ಯಮಾಪನ' ವಿಭಾಗದಲ್ಲಿ ಕಾರ್ಯತಂತ್ರ ಸಂಬಂಧಗಳು ಮತ್ತು ವ್ಯವಹಾರ ಆಭಿವೃದ್ಧಿ ವಿಭಾಗದ ಮುಖ್ಯಸ್ಥರಾಗಿದ್ದರು ಇವರು ಎಜುಕೇಶನಲ್ ಇನಿಷಿಯೇಟಿವ್ಸ್‌ನ 'ಬೃಹತ್ ಪ್ರಮಾಣದ ಮೌಲ್ಯಮಾಪನ' ವಿಭಾಗ ಸ್ಥಾಪಿಸಿದ್ದೇ ಅಲ್ಲದೆ ವೈಜ್ಞಾನಿಕ, ಕ್ರಮಬದ್ಧ, ನಿರಂತರ ಕಲಿಕಾನಿರ್ಧರಣೆಯ ಒಂದು ಚಕ್ರವನ್ನು ಮತ್ತು ಸಧೃಡ ವಿಶ್ಲೇಷಣಾ ವಿಧಾನಗಳನ್ನು ಮೊದಲ ಬಾರಿಗೆ ರೂಪಿಸಿದ್ದಾರೆ. ಕಳೆದ 10 ವರ್ಷಗಳಲ್ಲಿ ಇಐ ಆಗ್ನೇಯ ಏಷ್ಯಾದಲ್ಲಿ ಬೃಹತ್ ಪ್ರಮಾಣದ ಮೌಲ್ಯಮಾಪನಕ್ಕೆ ಪ್ರಮುಖ ಆಕರ ಸಂಸ್ಥೆಯಾಗಿದೆ. 24 ವರ್ಷಗಳಿಗಿಂತಲೂ ಹೆಚ್ಚುಕಾಲ ಶಿಕ್ಷಣ ಕ್ಷೇತ್ರದಲ್ಲಿ ಅನುಭವಪಡೆದು ಇವರು ಸೈಕೋ ಮೆಟ್ರಿಕ್ಸ್, ಬೃಹತ್ಪ್ರಮಾಣದ ಪರೀಕ್ಷಾ ಮಾಹಿತಿ ಅರ್ಥೈಕೆ ಮತ್ತು ವಿಶ್ಲೇಷಣೆಗೆ ಬಳಸಲಾಗುವ ಐಟಂ ರೆಸ್ಪಾನ್ಸ್ ಥಿಯರಿ(ಐಆರ್‌ಟಿ) ಸಂಪರ್ಕಕ್ಕೆ:*
vs@ei-india.com *or* vyjayas@hotmail.com